ದಿ: 08-10-2025.ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮೇರೆಗೆ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ 2, 4 ಹಾಗು 5 ನೇ ಆರೋಪಿ ಪರ ಶ್ರೀ.ಬಿ.ವಿ.ಬಿ ವಕೀಲರಿಂದ :

1) ನಾನು ವೀರಶೈವ ಲಿಂಗಾಯತ ಸಮುದಾಯಕ್ಕೆ ಸೇರಿದವನು ಎಂದರೆ ಸರಿ. ವೀರಶೈವ ಲಿಂಗಾಯತ ಸಮುದಾಯದಲ್ಲಿ ಅನ್ಯಜಾತಿಯರ ಜೊತೆ ಸಂಬಂಧ ಬೆಳೆಸುವ ಸಂಪ್ರದಾಯ ಇರುವುದಿಲ್ಲ ಎಂದರೆ ಸರಿ. 1 ನೇ ಆರೋಪಿ ಬಸವರಾಜ ಇವರು ವಾಲ್ಮೀಕಿ ಜನಾಂಗಕ್ಕೆ ಸೇರಿದವರು ಎಂದರೆ ಸರಿ. 2 ರಿಂದ 5 ನೇ ಆರೋಪಿತರು ಕೂಡ ವಾಲ್ಮೀಕಿ ಜನಾಂಗಕ್ಕೆ ಸೇರಿದವರು ಎಂದರೆ ಸರಿ. 1 ನೇ ಆರೋಪಿಯ ಜಾತಿ ನಮ್ಮ ಜಾತಿಗಿಂತ ಕೆಳ ಜಾತಿ ಎಂದರೆ ಸರಿ. ನನ್ನ ಮಗಳು ಪಾರ್ವತಿ 1 ನೇ ಆರೋಪಿಯ ಜೊತೆ ಪ್ರೀತಿಯ ಸಂಬಂಧ ಇತ್ತು ಎಂದರೆ ಸರಿಯಲ್ಲ. ಅವರಿಬ್ಬರು ಒಬ್ಬರಿಗೊಬ್ಬರು ಪರಸ್ಪರವಾಗಿ ಪ್ರೀತಿಸುತ್ತಿದ್ದರು ಮತ್ತು ಈ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಎರಡು ಮೂರು ತಿಂಗಳಿಗಿಂತ ಮೊದಲು ನನ್ನ ಮಗಳು ಹಾಗು 1 ನೇ ಆರೋಪಿಯ ನಡುವೆ ಪ್ರೀತಿಯ ಸಂಬಂಧ ಇತ್ತು ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. ಈ ವಿಷಯವಾಗಿ ನನ್ನ ಮಗಳಿಗೆ ಬುದ್ದಿವಾದ ಹೇಳಿದ್ದೆ ಎಂದರೆ ಸರಿ.

2) ನನ್ನ ಮಗಳು ನನ್ನ ಮುಂದೆ ನಾನು ಮುಂದೆ ಮದುವೆಯಾದರೆ 1 ನೇ ಆರೋಪಿಯನ್ನು ಮಾತ್ರ ಮದುವೆಯಾಗುತ್ತೇನೆ ಇಲ್ಲವಾದಲ್ಲಿ ಮದುವೆಯಾಗುವುದಿಲ್ಲ ಎಂದು ತಿಳಿಸಿದ್ದಳು ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ನನ್ನ ಮಗಳು ಲಿಂಗಾಯತ ಸಮುದಾಯಕ್ಕೆ ಸಂಬಂಧಪಟ್ಟವಳು 1 ನೇ ಆರೋಪಿಯು ವಾಲ್ಮೀಕಿ ಸಮುದಾಯಕ್ಕೆ ಸಂಬಂಧಪಟ್ಟವನು ನಿಮ್ಮಿಬ್ಬರ ಮದುವೆಯಾದರೆ ಸಮಾಜದಲ್ಲಿ ನಮ್ಮ ಮಾನ ಮರ್ಯಾದೆ ಹೋಗುತ್ತದೆ ಎಂದು ಅವಳಿಗೆ ಹೇಳಿದ್ದೆ ಎಂದು ಬರೆಸಿದ್ದೇನೆ ಎಂದರೆ ಸರಿ. ಆದರೂ ಕೂಡ ನನ್ನ ಮಗಳು ಹಟಕ್ಕೆ ಬಿದ್ದು ಮದುವೆಯಾದರೆ 1 ನೇ ಆರೋಪಿಯನ್ನೆ ಮದುವೆಯಾಗುತ್ತೇನೆ ಎಂದು ಹೇಳಿದ್ದಳು ಎಂದರೆ ಸರಿಯಲ್ಲ.

3) ನನಗೆ ಎರಡು ಮೂರು ತಿಂಗಳ ಹಿಂದೆ ಈ ವಿಷಯ ಗೊತ್ತಾದ ನಂತರ 1 ನೇ ಆರೋಪಿಯ ತಂದೆ ತಾಯಿಯನ್ನು ಕರೆಯಿಸಿ ಹಾಗು ಊರ ಹಿರಿಯರನ್ನು ಕರೆಯಿಸಿ ಅವರಿಗೆ ಬುದ್ದಿವಾದ ಹೇಳುವ ಪ್ರಯತ್ನ ಮಾಡಲಿಲ್ಲ. ನನ್ನ ಸಂಬಂಧಿಕರನ್ನು ಸೇರಿಸಿ ನನ್ನ ಮಗಳಿಗೆ ಬುದ್ದಿವಾದವನ್ನು ಹೇಳುವ ಪ್ರಯತ್ನ ಮಾಡಲಿಲ್ಲ ಆದರೆ ನಾನೇ ಬುದ್ದಿವಾದ ಹೇಳಿರುತ್ತೇನೆ.

4) ನನಗೆ ಈಗ 63 ವರ್ಷ ವಯಸ್ಸಾಗಿದೆ. ನನ್ನ ಮದುವೆ ನನ್ನ 24-25 ವರ್ಷದಲ್ಲಿ ಆಗಿದೆ ಎಂದರೆ ಸರಿ. ಎತ್ತಿನ ಬುದಿಹಾಳ ಗ್ರಾಮದಲ್ಲಿ ಕಿರಾಣಿ ವ್ಯಾಪಾರವನ್ನು ನಮ್ಮ ಹಿರಿಯರ ಕಾಲದಿಂದಲೂ ಮಾಡುತ್ತಿದ್ದೇವೆ. ಕಿರಾಣಿ ವ್ಯಾಪಾರ ಸಂಬಂಧವಾಗಿ ಸರಕುಗಳನ್ನು ಖರೀದಿಸಲು ಮೇಲಿಂದ ಮೇಲೆ ಬಳ್ಳಾರಿಗೆ ಬರುತ್ತೇವೆ ಎಂದರೆ ಸರಿ. ನಾನು ಜನಿಸಿದಾಗಿನಿಂದಲೂ ಬಳ್ಳಾರಿ ನನಗೆ ಚಿರಪರಿಚಿತ ಎಂದರೆ ಸರಿ. ಬಳ್ಳಾರಿಯಲ್ಲಿ ನಮಗೆ ಸಾಕಷ್ಟು ಜನ ಸಂಬಂಧಿಕರಿದ್ದಾರೆ. ನಮ್ಮ ಮನೆಯಲ್ಲಿ ನನ್ನ ಹೆಂಡತಿ ಕವಿತಾ, ಚೆನ್ನಮ್ಮ ಮತ್ತು ಅತ್ತೆ ಜ್ಯೋತಿ ಹಾಗು ನನ್ನ ಇನ್ನೂ ಇಬ್ಬರು ಮಕ್ಕಳು ಎಲ್ಲರೂ ಕೂಡಿ ಇದ್ದೇವೆ ಎಂದರೆ ಸರಿ.

5) ನನ ಮೊಬೈಲ್ ಸಂಖ್ಯೆ9740116903 ಎಂದರೆ ಸರಿ. ಚೆನ್ನಮ್ಮ ಇವಳ ಮೊಬೈಲ್ ಸಂಖ್ಯೆ 9964741807 ಎಂದರೆ ಸರಿ. ಮೊಬೈಲನ್ನು ನನ್ನ ಮಗಳು ಪಾರ್ವತಿ ಕೂಡ ಉಪಯೋಗಿಸುತ್ತಿದ್ದಳು. ನನ್ನ ಮಗಳು ಪಾರ್ವತಿ ಈ ಎರಡು ಮೊಬೈಲಗಳಿಂದ 1 ನೇ ಆರೋಪಿಗೆ ಸಂದೇಶ ಕಳುಹಿಸುವುದು, ವಾಟ್ಸಾಪ್ ಸಂದೇಶ ಕಳುಹಿಸುವುದು ಭಾವಚಿತ್ರ ಗಳನ್ನು ಕಳುಹಿಸುವುದು ಮತ್ತು ವಿಡಿಯೋಕಾಲ್ ಮಾಡುವುದನ್ನು ಮಾಡುತ್ತಿದ್ದಳು ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರು ಸಹ ಅವಳಿಗೆ ಮೊಬೈಲಗಳನ್ನು ಉಪಯೋಗಿಸಬೇಡ ಎಂದು ತಾಕೀತು ಮಾಡಿದ್ದೇ ಎಂದರೆ ಸರಿ. ಆದರೂ ಸಹ ನನ್ನ ಮಗಳು ಈ ಎರಡು ಮೊಬೈಲಗಳನ್ನು ಉಪಯೋಗಿಸುತ್ತಿದ್ದಳು ಎಂದರೆ ಸರಿ.

6) ತನಿಖೆಯಲ್ಲಿ ಪೊಲೀಸರಿಗೆ ಈ ಎರಡು ಮೊಬೈಲಗಳನ್ನು ತೋರಿಸಿಲ್ಲ. ಈ ಮೊಬೈಲಗಳಲ್ಲಿ ಇದ್ದ ಸಂದೇಶಗಳು ಹಾಗು ವಿಡಿಯೋ ಕಾಲ್ ರೆಕಾರ್ಡಗಳನ್ನು ಪೊಲಿಸೇರಿಗೆ ತೋರಿಸಿದರೆ ನನ್ನ ಮಗಳದ್ದೇ ತಪ್ಪು ಎಂದು ಗೊತ್ತಾಗುತ್ತದೆ ಎನ್ನುವ ಉದ್ದೇಶದಿಂದ ಈ ಎರಡು ಮೊಬೈಲಗಳನ್ನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳಿಗೆ 20 ವರ್ಷ ವಯಸ್ಸಾಗಿತ್ತು ಅವಳು ವಯಸ್ಕಳಾಗಿದ್ದಳು ಎಂದರೆ ಸರಿಯಲ್ಲ. ನನ್ನ ಮಗಳಿಗೆ 15 ವರ್ಷ ವಯಸ್ಸಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7) ನನ್ನ ಮಗಳಿಗೆ ಕನ್ನಡ, ಇಂಗ್ಲೀಷ್ ಮತ್ತು ತೆಲಗು ಭಾಷೆ ಬರುತ್ತಿತ್ತು ಎಂದರೆ ಸರಿ. ನಮ್ಮ ಊರಿನಲ್ಲಿ ಸಾಮಾನ್ಯವಾಗಿ ಮನೆಯಲ್ಲಿ ಕನ್ನಡ ಭಾಷೆ ಮಾತನಾಡುತ್ತೇವೆ ಹಾಗು ಹೊರಗೆ ತೆಲಗು ಭಾಷೆಯಲ್ಲಿ ಮಾತನಾಡುತ್ತೇವೆ. ನನ್ನ ಮಗಳು ಬಳ್ಳಾರಿ ಮಾಡೆಲ್ ಪಬ್ಲಿಕ್ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ವಿದ್ಯಾಭ್ಯಾಸ ಮಾಡುವುದನ್ನು ಬಿಟ್ಟು 2-3 ವರ್ಷಗಳಾಗಿದ್ದವು ಎಂದರೆ ಸರಿಯಲ್ಲ. ದಿನಾಂಕ 24.02.2024 ರಂದು ನನ್ನ ಮಗಳನ್ನು ರಾತ್ರಿ 08.45 ರಿಂದ 09.00 ಗಂಟೆ ಅವಧಿಯಲ್ಲಿ ಪೆದ್ದಮ್ಮ ದೇವಸ್ಥಾನದಿಂದ ಆರೋಪಿತರೆಲ್ಲರು ಅಪಹರಿಸಿಕೊಂಡು ಹೋಗುವುದನ್ನು ನಾನು ನೋಡಿಲ್ಲ. ನಾನು ಅಂಗಡಿಯಿಂದ ರಾತ್ರಿ 08.00 ಗಂಟೆಗೆ ಮನೆಗೆ ಬಂದು ಪೆದ್ದಮ್ಮ ದೇವಸ್ಥಾನಕ್ಕೆ ಹೋಗುವ ಸಮಯದಲ್ಲಿ ನನ್ನ ಮಗಳು ಮನೆಯಲ್ಲಿ ಇರಲಿಲ್ಲ.

8) ನಮ್ಮ ಮನೆಯಲ್ಲಿ ನನ್ನ ಹೆಂಡತಿಗೆ, ಚೆನ್ನಮ್ಮ ಇವಳಿಗೆ ಹಾಗು ಜ್ಯೋತಿ ಇವಳಿಗೆ ನನ್ನ ಮಗಳು ಎಲ್ಲಿದ್ದಾಳೆ ಎಂದು ವಿಚಾರಣೆ ಮಾಡಿರುತ್ತೇನೆ ಆದರೆ ನನ್ನ ಮಗಳು ಸಿಕ್ಕಿರುವುದಿಲ್ಲ. ನನ್ನ ಮಗಳು ಕಾಣೆಯಾಗಿದ್ದಾಳೆ ಎಂದು ನಾನು ಪೆದ್ದಮ್ಮ ದೇವಸ್ಥಾನಕ್ಕೆ ಹೋಗುವುದಕ್ಕಿಂತ ಮೊದಲು ಅಂದುಕೊಂಡಿರಲಿಲ್ಲ. ನಂತರ ಮನೆಗೆ ಬಂದು ವಿಚಾರ ಮಾಡಿದಾಗ ಮನೆಯ ಸದಸ್ಯರು ನನ್ನ ಮಗಳು ಪಾರ್ವತಿ ಎಲ್ಲಿಯೋ ಹೋಗಿದ್ದಾಳೆ ಎಂದು ಹೇಳಿದ್ದರು. ನಾನು ರಾತ್ರಿ 08.00 ಗಂಟೆಗೆ ಪೆದ್ದಮ್ಮ ದೇವಸ್ಥಾನಕ್ಕೆ ಹೋದಾಗ ಅಲ್ಲಿ ನನ್ನ ಮಗಳು ಇರಲಿಲ್ಲ. ನಂತರ ಮನೆಗೆ ಬಂದು ಪುನಃ ರಾತ್ರಿ 08.45 ಕ್ಕೆ ಪೆದ್ದಮ್ಮ ದೇವಸ್ಥಾನಕ್ಕೆ ಹೋದಾಗ ಅಲ್ಲಿ ನನ್ನ ಮಗಳು

ಇರಲಿಲ್ಲ. ಪೆದ್ದಮ್ಮವ್ವ ದೇವಸ್ಥಾನದ ಹತ್ತಿರ ನಾನು ಹೋದಾಗ ಹಲಕುಂದಿ ಮಾರಣ್ಣ, ಹಳ್ಳಿ ಮಾರೆಣ್ಣ ದಾದಾಖಲಂದರ್, ನಂದಿಸ್ವಾಮಿ ಹಾಗೂ ಸುಭಾಷ್ ಚಂದ್ರ ಬೋಸ್ ಇವರೆಲ್ಲರು ಇದ್ದರು, ಅಲ್ಲಿಗೆ ಹೋಗಿ ವಿಚಾರಣೆ ಮಾಡಿದಾಗ ನಾಗರಾಜನ ಮಗ ಬಸವರಾಜ ಅವರ ಅಣ್ಣ ಎರಿಸ್ವಾಮಿ ಹಾಗೂ ಅವರ ಸಂಗಡಿಗರು ಬಲತ್ಕಾರವಾಗಿ ನನ್ನ ಮಗಳನ್ನು ಪಾರ್ವತಿಯನ್ನು ಎರಡು ಹೀರೋ ಹೋಂಡಾ ವಾಹನಗಳ ಮೇಲೆ ಕರೆದುಕೊಂಡು ಹೋಗಿದ್ದಾರೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು ಪೆದ್ದಮ್ಮ ದೇವಸ್ಥಾನ ಹತ್ತಿರ ಇರಲಿಲ್ಲ ಹಾಗು ನನಗೆ ಯಾವುದೇ ವಿಷಯವನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ.

9) ಸದರಿಯವರು ಈ ವಿಷಯವನ್ನು ಹೇಳಿದಾಗ ನಾನು 1 ನೇ ಆರೋಪಿ ಹಾಗು ಅವರ ಅಣ್ಣ 2 ನೇ ಆರೊಪಿ ಅವರ ಮನೆಗೆ ಹೋಗಿ ಅವರು ಮನೆಯಲ್ಲಿ ಇದ್ದಾರೊ ಇಲ್ಲವೋ ಎಂದು ವಿಚಾರಣೆ ಮಾಡಲಿಲ್ಲ. 1 ಹಾಗು 2 ಆರೋಪಿತರ ತಂದೆ ತಾಯಿ ಜೊತೆ ನಿಮ್ಮ ಮಗ ಹೀಗೆ ಮಾಡಿದ್ದಾನೆ ಎಂದು ಕೂಡ ಅವರ ಜೊತೆ ವಿಚಾರಣೆ ಮಾಡಲಿಲ್ಲ. ನಂತರ ಬಳ್ಳಾರಿಗೆ ನನ್ನ ಮಗಳನ್ನು ಹುಡುಕಲು ನಾನು, ನನ್ನ ಮಗ, 5 ನೇ ಆರೋಪಿ ಮೂರ್ತಿ ಹೋಗಿದ್ದೆವು. ಚಾಸಾ-7 ಸುಭಾಷ ಚಂದ್ರ ಇವರು ನಮ್ಮ ಚಿಕ್ಕ ದೊಡ್ಡಪ್ಪನ ಮಗ ಅವರು ನಮ್ಮ ಜೊತೆ ಬಂದಿರಲಿಲ್ಲ. ನಾನು ಮನೆಗೆ ಹೋಗಿ ಪುನಃ ಬಂದ ನಂತರ ನನ್ನ ಜೊತೆ ಬಂದಿದ್ದರು. ಬಳ್ಳಾರಿಯಲ್ಲಿ ರೈಲ್ವೆ ಸ್ಟೇಷನ್ ಸಮೀಪದಲ್ಲಿ ಗ್ರಾಮೀಣ ಪೊಲೀಸ ಠಾಣೆ ಇದೆ. ಅದರ ಸಮೀಪದಲ್ಲಿ ಗಾಂಧಿನಗರ ಪೊಲೀಸ್ ಠಾಣೆ ಹಾಗು ಬ್ರೂಸ್ ಪೇಟ್ ಪೊಲೀಸ್ ಠಾಣೆಗಳು ಇವೆ. ಅದೇ ದಿವಸ 1 ಹಾಗು 2 ನೇ ಆರೋಪಿತರು ನನ್ನ ಮಗಳು ಅಪಹರಣ ಮಾಡಿಕೊಂಡು ಹೋಗಿದ್ದಾರೆ ಎಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದೇನೆ. ಮಹಿಳಾ ಪೊಲೀಸ್ ಠಾಣೆಗೆ ದೂರು ಕೊಟ್ಟ ಬಗ್ಗೆ ನನ್ನ ಬಳಿ ದಾಖಲೆಗಳು ಇರುವುದಿಲ್ಲ.

10) ನಾನು ಅದೇ ದಿವಸ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದೇನೆ ಎಂದು ನನ್ನ ನಿಪಿ-1 ದೂರಿನಲ್ಲಿ ಬರೆಸಿಲ್ಲ. ನಾನು ಅದೇ ದಿವಸ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರನ್ನು

ನೀಡಿದ್ದೇನೆ ಎಂದು ಸೃಷ್ಟಿಸಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಳ್ಳಾರಿಯೆಲ್ಲ ಹುಡುಕಾಡಿ ಮನೆಗೆ ಬಂದ ನಂತರವೂ ಕೂಡ ನಾನು **1** ಹಾಗು **2** ನೇ ಆರೋಪಿತರ ಮನೆಗೆ ಹೋಗಿ ನನ್ನ ಮಗಳ ಬಗ್ಗೆ ವಿಚಾರಣೆ ಮಾಡಿಲ್ಲ. ಅದೇ ದಿವಸ ಮಧ್ಯ ರಾತ್ರಿ **01.30-02.00** ಗಂಟೆ ಸುಮಾರಿಗೆ ಹೊರಗಿನಿಂದ ಒಂದು ಮೋಟಾರ್ ಸೈಕಲ್ ಬಂದ ಶಬ್ದ ಕೇಳಿಸಿತು, ನಂತರ ಹೊರಗೆ ನೋಡಲಾಗಿ ಹಾಜರಿರುವ ಆರೋಪಿತರೆಲ್ಲರು ನನ್ನ ಮಗಳನ್ನು ಗಾಡಿಯ ಮೇಲೆ ತಂದು ಬಿಟ್ಟು ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**11)** ರವಿವಾರ ಹಾಗು ಸೋಮುವಾರ ನನ್ನ ಮಗಳು ಈ ರೀತಿ ಆಯಿತಲ್ಲಾ, ನಮ್ಮ ಮರ್ಯಾದೆ ಹೋಯಿತು ಎಂದು ಅಳುತ್ತಾ ಇದ್ದಳು, ಅವರು ಎರಡು ದಿವಸ ಆದರೂ ಊಟ ಮಾಡಿಲ್ಲ ಮತ್ತು ನೀರು ಕುಡಿದಿಲ್ಲ, ಮತ್ತೆ ಮಂಗಳವಾರ ದಿನಾಂಕ **20.07.2024** ರಂದು ಮಧ್ಯಾಹ್ನ **03.00** ಗಂಟೆಗೆ ಅವಳನ್ನು ಸಮಾಧಾನ ಮಾಡಿ ಅವಳು ಮಲಗಿಕೊಂಡಿದ್ದಳು, ನಾನು ಅಂಗಡಿಗೆ ಹೋದೆ ಎನ್ನುವ ವಿಷಯವನ್ನು ನನ್ನ ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ಈ ವಿಷಯವನ್ನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ಸೃಷ್ಟಿಸಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**12)** ನನ್ನ ಮಗಳು ಮನೆಗೆ ಬಂದ ನಂತರ ದಿನಾಂಕ **25, 26** ಹಾಗು **27.02.2024** ರದು **1** ಹಾಗು **2** ನೇ ಆರೋಪಿತರು ನನ್ನ ಮಗಳನ್ನು ಅಪಹರಿಸಿಕೊಂಡು ಹೋಗಿದ್ದರು ಎಂದು ದೂರನ್ನು ನೀಡಲಿಲ್ಲ. ಈ ಮೂರು ದಿವಸ ಊರಲ್ಲಿ ಯಾವುದೇ ಪಂಚಾಯತಿಯನ್ನು ಮಾಡಿಲ್ಲ ಮತ್ತು **1** ಹಾಗು **2** ನೇ ಆರೋಪಿತರ ತಂದೆ ತಾಯಿಗೆ ಯಾವುದೇ ವಿಷಯವನ್ನು ತಿಳಿಸಿಲ್ಲ. ನನ್ನ ಮಗಳನ್ನು ಆರೋಪಿತರು ಅಪಹರಿಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಆರೋಪಿತರ ಮೇಲೆ ನನ್ನ ಮಗಳನ್ನು ಅಪರಿಸಿದ ಮೇಲೆ ದೂರನ್ನು ನೀಡಿಲ್ಲ, ಯಾವುದೇ ಪಂಚಾಯತಿಯನ್ನು ಮಾಡಿಲ್ಲ ಹಾಗು ಅವರ ತಂದೆತಾಯಿಗೆ ಆ ವಿಷಯವನು ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಮರಣ ಹೊಂದಿದ ನಂತರ ಆರೋಪಿತರು ನನ್ನ ಮಗಳನ್ನು ಅಪಹರಿಸಿಕೊಂಡು ಹೋಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13) 3 ರಿಂದ 5 ನೇ ಆರೋಪಿತರು ಕೂಡ 1 ಹಾಗು 2 ನೇ ಆರೋಪಿತರ ಜೊತೆ ನನ್ನ ಮಗಳನು ಅಪಹರಿಸಿಕೂಂಡು ಹೋಗಿದ್ದರು ಎನ್ನುವ ಬಗ್ಗೆ ನಿಪಿ-1 ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. 3 ರಿಂದ 5 ನೇ ಆರೋಪಿತರನ್ನು ನ್ಯಾಯಾಲಯದಲ್ಲಿ ಮೊದಲನೇ ಬಾರಿಗೆ ಅವರ ಹೆಸರನ್ನು ಹೇಳಿದ್ದೇನೆ ಹೊರತು ಅದಕ್ಕಿಂತ ಮೊದಲು ಎಲ್ಲಿಯೂ ಕೂಡ ಅವರ ಹೆಸರನ್ನು ಹೇಳಿಲ್ಲ ಎಂದರೆ ಸರಿಯಲ್ಲ. ದಿನಾಂಕ 27.02.2024 ರಂದು ಸಾಯಂಕಾಲ ನನ್ನ ಮಗಳನ್ನು ವಿಮ್ಸ್ ಆಸ್ಪತ್ರೆ ಬಳ್ಳಾರಿಗೆ ದಾಖಲಿಸಿದ ನಂತರವೂ ಕೂಡ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಮೊದಲನೇ ಬಾರಿಗೆ ನಾನು ದೂರನ್ನು ನನ್ನ ಮಗಳು ಮರಣ ಹೊಂದಿದ ನಂತರ 28.02.2024 ರಂದು ನೀಡಿದ್ದೇನೆ ಎಂದರೆ ಸರಿ. ನಿಪಿ-1 ದೂರು ನನ್ನ ಹಸ್ತಾಕ್ಷರದಲ್ಲಿ ಇರುವುದಿಲ್ಲ.

14) ನನ್ನ ಮಗಳನ್ನು ನಾವೇ ಅವಳ ಪ್ರೀತಿಗೆ ವಿರೋಧಿಸಿ ಮನೆಯಲ್ಲಿ ಕೂಡಿ ಹಾಕಿ ಚಿತ್ರ ಹಿಂಸೆ ಕೊಟ್ಟಿದ್ದರಿಂದ ಅವಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಹೊರತು ಅವಳ ಸಾವಿಗೆ ಆರೋಪಿತರು ಯಾರೂ ಕಾರಣರಲ್ಲ ಎಂದರೆ ಸರಿಯಲ್ಲ. 24.02.2024 ರಾತ್ರಿಯಿಂದ ಅವಳು ಮರಣ ಹೊಂದುವವರೆಗೂ ನಮ್ಮ ಮನೆಯಲ್ಲಿಯೇ ಇದ್ದಳು ಎಂದರೆ ಸರಿ. ಈ ಮಧ್ಯದ ಅವಧಿಯಲ್ಲಿ ಆರೋಪಿತರಾರು ನಮ್ಮ ಮನೆಗೆ ಬಂದಿಲ್ಲ ಹಾಗು ನಮ್ಮ ಮಗಳ ಜೊತೆ ಸಂಪರ್ಕಿಸಿಲ್ಲ ಎಂದರೆ ಸರಿ. ನನ್ನ ಮಗಳ ಸಾವಿಗೆ ನಾವೇ ಕಾರಣೀಭೂತರಾಗುತ್ತೇವೆ ಅದನ್ನು ತಪ್ಪಿಸಿಕೊಳ್ಳುವ ಸಲುವಾಗಿ ಆರೋಪಿತರ ಮೇಲೆ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

15) ನನ್ನ ಮಗಳನ್ನು ದಿನಾಂಕ 27.02.2024 ರಂದು ವಿಮ್ಸ್ ಆಸ್ಪತ್ರೆಗೆ ಸೇರಿಸಿದಾಗ ಅಲ್ಲಿ ಮಹಿಳಾ ಪೊಲೀಸ್ ಠಾಣೆಯ ಸರ್ ಕೂಡ ಪರಿಶೀಲಿಸಲು ಬಂದಿದ್ದರು, ಅವರು ನನ್ನ ಮಗಳಿಗೆ ಹೀಗೇಕೆ ಮಾಡಿಕೊಂಡಿದ್ದಿ ಎಂದು ಕೇಳಿದಾಗ ನಮ್ಮ ತಂದೆ ತಾಯಿ ಮರ್ಯಾದೆ ಹೋಗುತ್ತದೆ ಎಂದು ಹೀಗೆ ಮಾಡಿಕೊಂಡಿದ್ದೇನೆ ಎಂದು ಅವರಿಗೆ ಹೇಳಿದ್ದಳು ಎನ್ನುವ ವಿಷಯವನ್ನು ನನ್ನ ದೂರಿನಲ್ಲಿ ಬರೆಸಿಲ್ಲ ಮತ್ತು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ

ಸುಳ್ಳು ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ **27.02.2024** ರಂದು ವಿಮ್ಸ್ ಆಸ್ಪತ್ರೆಗೆ ಮಹಿಳಾ ಪೊಲೀಸ್ ಠಾಣೆಯ ಸರ್ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ಸದರಿ ಆಸ್ಪತ್ರೆಗೆ ಯಾವುದೇ ಪೊಲೀಸರು ಬಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಪ್ರೀತಿಗೆ ವಿರೋಧವಾಗಿ ನಮ್ಮ ಸಂಬಂಧಿಕರಲ್ಲಿ ಅವಳಿಗೆ ಮದುವೆ ಮಾಡಲು ತಯಾರಿಸಿದ್ದರಿಂದ ಅವಳು ಮನ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ.

**16)** ಪೊಲೀಸರು ಬಂದಾಗ ನಮ್ಮ ಮನೆಯ ಹತ್ತಿರ ನಿಪಿ-**2** ಪಂಚನಾಮೆ ಹಾಗು ಪೆದ್ದಮ್ಮ ದೇವಸ್ಥಾನ ಹತ್ತಿರ ನಿಪಿ-**2** ಪಂಚನಾಮೆ ಮಾಡಿದರು ಹಾಗು ನಿಪಿ-**4** ಕಚ್ಚಾನಕ್ಷೆಯನ್ನು ತೆಗೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ದಾಖಲೆಗೆಳಿಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-**5** ರಿಂದ **9** ಭಾವಚಿತ್ರಗಳು ಈ ಪ್ರಕರಣಕ್ಕಾಗಿ ಸೃಷ್ಟಿಸಿ ತೆಗೆದ ಭಾವಚಿತ್ರಗಳು ಎಂದರೆ ಸರಿಯಲ್ಲ.

ಪಾಟೀ ಸವಾಲು **1** ಹಾಗು **3** ಆರೋಪಿತರ ಪರವಾಗಿ ಶ್ರೀ ಎಮ್.ಎ.ಬಿ ವಕೀಲರಿಂದ

ಶ್ರೀ ಎಮ್.ಎ.ಬಿ ವಕೀಲರು ಶ್ರೀ ಬಿ.ವಿ.ಬಿ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .)

ಓ . ಹೇ. ಕೆ . ಸರಿ ಇದೆ .

**C/C, 2** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ .